ಮೇಯುತ್ತಿದ್ದರೂ ಕರುವಿಗೆ ಹಾಲು ಕುಡಿಸುವ ಯೋಚನೆ ಪುಣ್ಯಕೋಟಿಗೆ. ಪುಣ್ಯಕೋಟಿ ಉಳಿದ ಗೋವುಗಳೊಡನೆ ತನ್ನ ಸಂಬಂಧಗಳನ್ನು ಹೇಳುತ್ತ ತನ್ನ ತಬ್ಬಲಿ ಕರುವನ್ನು ನೋಡಿಕೊಳ್ಳಬೇಕೆಂದು ಬಿನ್ನವಿಸುವ ಪ್ರಸಂಗವನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ಸಾವು ಅನಿವಾರ್ಯವೆಂದು ಗೊತ್ತಿದ್ದರೂ, ಅನಿವಾರ್ಯವಾದದ್ದನ್ನು ಎದುರಿಸುವ ಧೈರ್ಯವನ್ನು ತೋರಿಸುತ್ತ ಜೀವನವನ್ನು ಶ್ರದ್ಧೆಯಿಂದ ಬದುಕಲೇಬೇಕೆಂಬ ಮೌಲ್ಯವನ್ನು ಪುಣ್ಯಕೋಟಿ ಪ್ರತಿನಿಧಿಸುತ್ತದೆ. ಇದಕ್ಕೆ ವಿರುದ್ಧವಾಗಿ ಹುಲಿ ಮೌಲ್ಯಗಳಿಲ್ಲದ ಒಂಟಿಜೀವ. 'ಅಬ್ಬರಿಸಿ ಹಸಿ ಹಸಿದು ಬೆಟ್ಟದ ಕಿಬ್ಬಿಯೊಳು ತಾನಿದ್ದನು.' ಹಸಿವಿನಿಂದ ಕುರುಡಾದ ಹುಲಿಗೆ ತಿಳಿವಳಿಕೆಯಾಗಲಿ, ನಡವಳಿಕೆಯ ರೀತಿನೀತಿಗಳಾಗಲಿ ಗೊತ್ತಿಲ್ಲ. ತನ್ನ ಕರುವಿಗೆ ಹಾಲು ಕುಡಿಸಿ ತಿರುಗಿ ಬರುತ್ತೇನೆಂದು ಪುಣ್ಯಕೋಟಿ ಮಾತು ಕೊಟ್ಟಾಗ ಹುಲಿಗೆ ಆಶ್ಚರ್ಯವಾಗುತ್ತದೆ. ಖಂಡಮಾಂಸಗಳಿಂದ ತುಂಬಿದ ಗೋವು ಅದರ ಕಣ್ಣಿಗೆ ಹಿಡಿ ಕೂಳು ಮಾತ್ರ. ಹಸಿದವನಿಗೆ ಅನ್ನದ ಮೇಲೆ ಸರ್ವಾಧಿಕಾರವಿದೆ ನಿಜ. ಆದರೆ ಅನ್ನ ಕೇವಲ ಅನ್ನವಾಗದೆ ಮತ್ತೇನೋ ಆದರೆ, ಪ್ರಾಣ ಹಿಂಜರಿಯಲೇಬೇಕಾಗುತ್ತದೆ.

ಆದರೆ ಹುಲಿ ಮತ್ತು ಗೋವುಗಳ ಸಂಬಂಧ ಇಲ್ಲಿಗೇ ಮುಕ್ತಾಯವಾಗುವುದಿಲ್ಲ. ಅವುಗಳ ನಡುವಿನ ವಿರೋಧದ ಆಚೆ ಇನ್ನೊಂದು ಸಂಬಂಧವೂ ಇದೆ. ಅನ್ನ-ಪ್ರಾಣಿಗಳ ಮಿಥುನ ಸಂಬಂಧ ಎಂದೆಂದಿಗೂ ಇರುವಂಥದ್ದು. ಈ ಸಂಬಂಧದ ತಳಹದಿ ಹಸಿವು, ಕಾಮ, ಹಿಂಸೆ ಹೀಗೆ ಏನೇನೋ ರೂಪ ತಾಳಬಹುದು. ತನ್ನ ಮಗುವಿನ ಹೊಟ್ಟೆ ತುಂಬಿಸಲೆಂದು ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುವ ತಾಯಿಯ ಹಸಿವೆ ಮೌಲ್ಯವಾಗಬಲ್ಲ ಒಂದು ಭಾವನೆಯಾಗುತ್ತದೆ. ಪ್ರಕೃತಿ ಮತ್ತು ಸಂಸ್ಕೃತಿ ಇವೆರಡೂ ಒಂದಕ್ಕೊಂಡು ವಿರುದ್ಧವಾಗದೆ ಸಂಬದ್ಧವಾಗಿರುವುದು ಇಲ್ಲಿಯ ವಿಶೇಷತೆಯಾಗಿದೆ. ಹುಲಿಯ ಪ್ರಾಣ-ಶಕ್ತಿಗೆ ಈ ಅರಿವಾಗುತ್ತದೆ.

ಎನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ನಾನೇನ ಪಡೆವೆನು
ಎನ್ನುತಾ ಹುಲಿ ಹಾರಿ ನೆಗೆದು
ತನ್ನ ಪ್ರಾಣವ ಬಿಟ್ಟಿತು.

ಇನ್ನು ಹುಲಿ ಹುಲಿಯಾಗಿ ಉಳಿಯುವುದು ಸಾಧ್ಯವಿಲ್ಲವೆನ್ನುವುದನ್ನು ಈ ಮರಣ ಸೂಚಿಸುತ್ತದೆ. ಭಾವನೆಯ ಸ್ತರದಲ್ಲಿ ಇದು ಪಶ್ಚಾತ್ತಾಪದ ಮರಣವಾಗಿದೆ. ಪುಣ್ಯಕೋಟಿಯನ್ನು 'ಅಕ್ಕ' ಎಂದು ಹುಲಿ ಕರೆದಿರುವುದು ಇನ್ನೊಂದು ಭಾವನೆಯಾಗಿದೆ. ಆದರೆ ಹಸಿವೆಯನ್ನು ಕಳೆದುಕೊಂಡ ಹುಲಿ ತನ್ನ ಮತ್ತು ಗೋವಿನ ಅವಿಭಾಜ್ಯ ಸಂಬಂಧವನ್ನು ಹೇಳಿರುವುದು ಭಾವನೆಯಾಚೆಗಿನ ಸತ್ಯವಾಗಿದೆ, ಪುಣ್ಯಕೋಟಿಯ ನಡವಳಿಕೆಯಲ್ಲಿ ಹಿಂಸೆಯಿಲ್ಲ. ಪ್ರೀತಿಯ ತೀವ್ರ ಭಾವನೆಯೂ ಇಲ್ಲ. ಕರುವಿಗೆ ಹಾಲು ಕುಡಿಸುವಂತೆಯೇ 'ಖಂಡವಿದೆ ಕೋ ಮಾಂಸವಿದೆ ಕೋ' ಎಂದು ಹುಲಿಗೂ ತನ್ನನ್ನು ಸಮರ್ಪಿಸಿಕೊಳ್ಳುತ್ತದೆ. ಪುಣ್ಯಕೋಟಿಯ ಹತ್ತಿರ ಪ್ರೀತಿಯ ಉತ್ಕಟತೆಗಿಂತ ಹೆಚ್ಚಾಗಿ ಪ್ರೀತಿಯ ತಿಳಿವಳಿಕೆಯಿದೆ. ಅಡವಿಯ ಹುಲ್ಲನ್ನು ತಾನು ತಿನ್ನುವಂತೆ ಹುಲಿ ತನ್ನನ್ನು ತಿನ್ನುತ್ತದೆ ಎಂಬ ತಿಳಿವಳಿಕೆ ಅದರದು. ಆದರೆ ಹುಲಿಯ ಹಸಿವೆಯಂತೆ ತನ್ನದು ವಂಧ್ಯವಾದ ಬಯಕೆ ಅಲ್ಲ ಎಂಬ ತಿಳಿವಳಿಕೆಯೂ ಅದರಲ್ಲಿದೆ. ಇದು ನಿಜವಾದ ಅರ್ಥದಲ್ಲಿ ಅಹಿಂಸೆಯಾಗಿದೆ.

## ಅಭಿಜಾತಕ್ಕೂ ಮಿಗಿಲು

'ಗೋವಿನ ಕಥೆ'ಯಲ್ಲಿಯ ಈ ಪರಿಷ್ಕಾರ ಯಾವ ಅಭಿಜಾತ ಕಾವ್ಯಕ್ಕೂ ಕಡಿಮೆಯಾಗಿಲ್ಲ. ಆದರೆ ಈ ಹಾಡನ್ನು ಬರೆದ ಕವಿ ಈ ಮೌಲ್ಯಗಳ ತಿಳಿವಳಿಕೆಯನ್ನು ಸ್ವಪ್ರಜ್ಞೆಯಿಂದ ಪಡೆದಿರಬಹುದೇ ಎಂಬ ಸಂಶಯ ಬಾಧಿಸಬಹುದು. ಹಾಗೆ ಇರಲಿಕ್ಕೂ ಇಲ್ಲ. ಜಾನಪದ ಕಾವ್ಯಮೂರ್ತವಾದ ಅನುಭವವನ್ನು ಇದ್ದಕ್ಕಿದ್ದ ಹಾಗೆಯೇ ಸ್ವೀಕರಿಸುತ್ತದೆ. ಅನುಭವದ ಸಜೀವತೆ ಸಾಯದಂತೆ ನೋಡಿಕೊಳ್ಳುವುದೊಂದೇ ಅದರ ಕರ್ತವ್ಯವಾಗುತ್ತದೆ.

'ಮನೋಹರ ಗ್ರಂಥಮಾಲಾ' ಪ್ರಕಟಣೆ, ಕೀರ್ತಿನಾಥ ಕುರ್ತಕೋಟಿಯವರ
'ಸಂಸ್ಕೃತಿ ಸ್ಪಂದನ' ಕೃತಿಯ ಪ್ರಬಂಧ